ನ್ಯಾಯಾಲಯಗಳಲ್ಲಿ ಖಾಲಿ ಇರತಕ್ಕ ನ್ಯಾಯಾಧೀಶರ ಹುದ್ದೆಗಳನ್ನು ಭರ್ತಿ

171 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ವಿವಿಧ ನ್ಯಾಯಾಲಯಗಳಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯವೂ ಸೇರಿದಂತೆ ಖಾಲಿ ಇರತಕ್ಕ ನ್ಯಾಯಾಧೀಶರುಗಳ ಹುದ್ದೆಗಳ ಸಂಖ್ಯೆ ಎಷ್ಟು.

ಆ) ಆ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) 9 (ಒಂಭತ್ತು)

ಆ) ಪ್ರಸ್ತಾವನೆ ಉಚ್ಚ ನ್ಯಾಯಾಲಯದಿಂದ ಬಂದ ನಂತರ, ಸರ್ಕಾರದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಕುರಿಗಳನ್ನು ಉತ್ತಮ ಪಡಿಸುವ ಬಗ್ಗೆ

172 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕುರಿ ಮತ್ತು ಕುರಿ ಉತ್ಪನ್ನ ಮಂಡಳಿ ಹಾಗೂ ಪಶು ಸಂಗೋಪನಾ ಇಲಾಖೆ ಸ್ಥಳೀಯ ಜಾತಿಗಳ ಕುರಿಗಳನ್ನು ಉತ್ತಮಪಡಿಸಲು ಕೈಗೊಂಡಿರುವ ಕ್ರಮಗಳೇನು?

ಆ) ರಾಜ್ಯದಲ್ಲಿರತಕ್ಕ ಕುರಿ ಸಾಕಾಣಿಕಾ ಕ್ಷೇತ್ರಗಳು, ಕುರಿ ಮತ್ತು ಉಣ್ಣೆ ಅಭಿವೃದ್ಧಿ ಕೇಂದ್ರಗಳು ಮತ್ತು ಕುರಿ ಪೋಷಕರ ಸಂಘಗಳ ಸಂಖ್ಯೆ ಎಷ್ಟು?

ಇ) ಇವುಗಳಿಗಾಗಿ 1995-96ನೇ ಸಾಲಿನಲ್ಲಿ ಒದಗಿಸಲಾಗಿರುವ ಹಣವೆಷ್ಟು?

ಈ) 1995-96ನಲ್ಲಿ ಎಷ್ಟು ಕುರಿ ಸಾಕಾಣಿಕಾ ಕ್ಷೇತ್ರಗಳು, ಕುರಿ ಮತ್ತು ಉಣ್ಣೆ ಅಭಿವೃದ್ಧಿ ಕೇಂದ್ರಗಳು ಹಾಗೂ ಕುರಿ ಪೋಷಕರ ಸ್ಥಾಪಿಸಲಾಗುವುದು.

ಉ) ಕುರಿ ಆರೋಗ್ಯ ರಕ್ಷಣೆ, ಉಣ್ಣೆಯನ್ನು ಕತ್ತರಿಸಿ ರೈತರಿಗೆ ಉತ್ತಮ ಬೆಲೆ ಒದಗಿಸುವ ಬಗ್ಗೆ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು?

ಊ) ಕುರಿ ಮತ್ತು ಕುರಿ ಉತ್ಪನ್ನ ಮಂಡಳಿಗೆ ಅಧಿಕಾರೇತರರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆಯೇ?

ಋ) ಈ ಮಂಡಳಿಯನ್ನು ನಿಗಮವನ್ನಾಗಿ ಪರಿವರ್ತಿಸಲು ಸರ್ಕಾರ ಉದ್ದೇಶಿಸಲಾಗಿದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಸ್ಥಳೀಯ ಜಾತಿಯ ಕುರಿಗಳನ್ನು ಉತ್ತಮ ಪಡಿಸಲು ರಾಜ್ಯದಲ್ಲಿರುವ ಕುರಿ ಸಾಕಾಣಿಕಾ ಕೇಂದ್ರಗಳಿಂದ ಹಾಗೂ ಹೊರ ರಾಜ್ಯಗಳಿಂದ ಮಿಶ್ರತಳಿ ಟಗರುಗಳನ್ನು ತರಿಸಿ, ಕುರಿ ಸಾಕಾಣಿಕಾದಾರರಿಗೆ ವಿತರಿಸಲಾಗುತ್ತಿದೆ.

ಆ) ಪಶು ಸಂಗೋಪನಾ ಇಲಾಖಾ ಅಡಿಯಲ್ಲಿ :

1)	ಕುರಿ ಸಾಕಾಣಿಕಾ ಕ್ಷೇತ್ರಗಳು	3
2)	ಕುರಿ ಸಾಕಾಣಿಕಾದಾರರ ಸಂಘ	10
3)	ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆಗಳು	7

ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿ ಅಡಿಯಲ್ಲಿ

1)	ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆ	2
2)	ಕುರಿ ಸಾಕಣೆ ಕ್ಷೇತ್ರಗಳು	2

ಇ) ಪಶುಸಂಗೋಪನಾ ಇಲಾಖೆ ಅಡಿಯಲ್ಲಿ ರೂ. 133.21 ಲಕ್ಷಗಳು

ಕುರಿ ಮಂಡಳಿ ಅಡಿಯಲ್ಲಿ ರೂ. 349.00 ಲಕ್ಷಗಳು

ಒಟ್ಟು ರೂ. 482.21 ಲಕ್ಷಗಳು.

ಈ) 1 ವಿದೇಶಿ ತಳಿಯ ಕುರಿ ಸಂವರ್ಧನಾ ಕ್ಷೇತ್ರವನ್ನು ಸ್ಥಾಪಿಸಲಾಗುತ್ತಿದೆ.

ಉ) 1) 200 ಕುರಿ ಪೋಷಕರ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗುತ್ತಿದೆ.

2) ಗುಲ್ಬರ್ಗಾ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ 2 ಉಣ್ಣೆ ಸಂಸ್ಕರಣಾ ಹಾಗೂ ವಿತರಣಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.

3) 5 ಉಣ್ಣೆ ವಸ್ತುಗಳ ಅಭಿವೃದ್ಧಿ ಹಾಗೂ ರೈತರ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

4) ಉಣ್ಣೆ ವಸ್ತುಗಳ ಅಭಿವೃದ್ಧಿ ಹಾಗೂ ರೈತರ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

5) ಕುರಿ ಸಂವರ್ಧನಾ ಕ್ಷೇತ್ರಗಳನ್ನು ಬಲಪಡಿಸಲಾಗುವುದು.

6) ಕುರಿ ತಳಿ ಅಭಿವೃದ್ಧಿಗಾಗಿ, ಮಿಶ್ರತಳಿ ಟಗರುಗಳನ್ನು ರೈತರಿಗೆ ಒದಗಿಸಲಾಗುವುದು, ಹಾಗೂ ಟಗರು ಮರಿಗಳನ್ನು ಸಹಾಯ ಧನದ ರೂಪದಲ್ಲಿ ವಿತರಿಸಲಾಗುವುದು ಕುರಿಗಳ ಆರೋಗ್ಯ ರಕ್ಷಣೆಗೆ ಜಂತು ನಾಶಕ ಔಷಧಿಗಳನ್ನು ನೀಡಲಾಗುವುದು.

7) ಭಾರತ ಸರ್ಕಾರದ ಉಣ್ಣೆ ಮಂಡಳಿ ನೆರವಿನಿಂದ ಉಣ್ಣೆ ನೇಯುವುದಕ್ಕೆ ಮೆಡ್ಲೇರಿ ಚರಕಗಳನ್ನು ಶೇಕಡ 50 ರಷ್ಟು ಸಹಾಯಾನುದಾನದ ರೂಪದಲ್ಲಿ ವಿತರಿಸಲಾಗುವುದು.

8) ರೈತರಿಗೆ ಕಾರ್ಪೆಟ್ ನೇಯುವ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ಯಾಂತ್ರೀಕೃತ ಉಣ್ಣೆ ಕಟಾವು ತರಬೇತಿ ನೀಡಲಾಗುವುದು.

9) ಸಮಗ್ರ ಕುರಿ ಆರೋಗ್ಯ ರಕ್ಷಣೆಗೆ ಕುರಿ ಜಂತು ನಾಶಕ ಔಷಧಿ ನೀಡಲಾಗುವುದು

10) ಕುರಿ ಸಂವರ್ಧನಾ ಕ್ಷೇತ್ರಗಳಲ್ಲಿ ವಿದೇಶಿ ಶುದ್ದ ತಳಿ ಹಾಗೂ ಮಿಶ್ರ ಹಾಗೂ ಮಿಶ್ರ ತಳಿ ಟಗರುಗಳನ್ನು ಉತ್ಪಾದಿಸಿ, ರೈತರಿಗೆ ವಿತರಿಸಲಾಗುತ್ತಿದೆ ಹಾಗೂ ರೈತರಿಗೆ ಆಧುನಿಕ ಕುರಿ ಸಂವರ್ಧನಾ ಕಾರ್ಯಕ್ರಮಗಳಲ್ಲಿ ತರಬೇತಿ ನೀಡಲಾಗುತ್ತಿದೆ.

ಊ) ಇಲ್ಲ.

ಋ) ಇಲ್ಲ.

ಜವಾಹರ್ ರೋಜಗಾರ್ ಯೋಜನೆಗೆ ಹಣ ಬಿಡುಗಡೆ

173 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ಜವಾಹರ್ ರೋಜಗಾರ್ ಯೋಜನೆಯಲ್ಲಿ ಇಲ್ಲಿಯವರೆಗೆ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿರುವ ಹಣವೆಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಿಲ್ಲಾ ಪಂಚಾಯತಿಗಳಿಗೆ ತಮ್ಮ ವಂತಿಕೆಯ ಪ್ರಮಾಣದ ಹಣವನ್ನು ಬಿಡುಗಡೆ ಮಾಡುವಾಗ ಅನುಸರಿಸುತ್ತಿದ್ದ ಮಾರ್ಗಗಳು ಯಾವುವು?

ಇ) ನೇರವಾಗಿ ಜಿಲ್ಲಾ ಪಂಚಾಯಿತಿಗೆ ಸರ್ಕಾರ ಹಣವನ್ನು ಬಿಡುಗಡೆ ಮಾಡಿ, ಸರ್ಕಾರದ ಆದೇಶದಂತೆ ಜನಸಂಖ್ಯೆ ಮತ್ತು ಪರಿಶಿಷ್ಟ ಜಾತಿ ವರ್ಗದ ಪ್ರಮಾಣದ ಆಧಾರದ ಮೇಲೆ ಗ್ರಾಮ ಪಂಚಾಯತ್‌ಗೆ ಮತ್ತು ಜಿಲ್ಲಾ ಪಂಚಾಯತಿಯ ಶೇಕಡಾ 20 ಯೋಜನೆಯ ಕಾಮಗಾರಿಗಳಿಗೆ ಹಂಚುವ ಕ್ರಮ ಸರಿಯೇ?

ಈ) ಸರ್ಕಾರದವರು ನಿರ್ಧಿಷ್ಟ ಕಾಮಗಾರಿಗಳಿಗೆ ಕ್ಷೇತ್ರವಾರು, ತಾಲ್ಲೂಕುವಾರು ಹಣವನ್ನು ಮಂಜೂರು ಮಾಡುವುದರ ಮೂಲಕ ಜಿಲ್ಲಾ ಪಂಚಾಯತಿಗಳಿಗೆ ಹಣವನ್ನು ಬಿಡುಗಡೆ ಮಾಡಲು ಅವಕಾಶವಿದೆಯೇ, ಹಾಗಿದ್ದಲ್ಲಿ ಇದರಿಂದ ಕೇಂದ್ರ ಸರ್ಕಾರದ ನಿಬಂಧನೆಯ ಉಲ್ಲಂಘನೆಯಾಗುವುದಿಲ್ಲವೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವರು) :